ತನಿಖೆ ನಡೆಸಿ ಅಂಥದ್ದು ಏನಾದರೂ ಕಳಪೆ ಕಾಮಗಾರಿ ಆಗಿದ್ದರೆ ಸೂಕ್ತ ಕೈಗೊಳ್ಳುತ್ತೇವೆ ಮತ್ತು ಆದಷ್ಟು ಶೀಘ್ರವಾಗಿ ಇದನ್ನು ಮುಗಿಸುವಂಥ ಕೆಲಸವನ್ನು ಮಾಡುತ್ತೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಜಿಲ್ಲಾಧಿಕಾರಿಗಳೇ ಅದಕ್ಕೆ ಅಧ್ಯಕ್ಷರು. ಮಾನ್ಯ ಅಧ್ಯಕ್ಷರೆ, ಒಂದ್ನಿಮಿಷ.

ಅಧ್ಯಕ್ಷರು: ಕುಳಿತುಕೊಳ್ಳಿ. ರವಿ ಸುಬ್ರಹ್ಮಣ್ಯರವರನ್ನು ಕರೆದಿದೇನೆ.

ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವ ರೋಗಿಗಳಿಗೆ ಡಯಾಲಿಸಿಸ್

84 (421) ಶ್ರೀ ರವಿ ಸುಬ್ರಹ್ಮಣ್ಯ ಎಲ್.ಎ (ಬಸವನಗುಡಿ):– ಮಾನ್ಯ ಮುಖ್ಯಮಂತ್ರಿಗಳು ಈ ವಿಷಯವನ್ನು ದಯೆಯಿಟ್ಟು ತಿಳಿಸುವರೆ?

ಅ) ರಾಜ್ಯದಲ್ಲಿ ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವ ರೋಗಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಆ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಯಾಲಿಸಿಸ್ ಯಂತ್ರಗಳೆಷ್ಟು; (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು) HIV ಹಾಗೂ ICP [HBS] ಯಿಂದ ಬಳಲುತ್ತಿರುವ ರೋಗಿಗಳಿಗೆ ಎಷ್ಟು ಡಯಾಲಿಸಿಸ್ ಯಂತ್ರಗಳನ್ನು ಕಾಯ್ದಿರಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು);

ಇ) ಡಯಾಲಿಸಿಸ್ ಯಂತ್ರಗಳ ನಿರ್ವಹಣೆ ಮಾಡಲು ತಾಲ್ಲೂಕು ಕೇಂದ್ರಗಳಲ್ಲಿ ತಜ್ಞರಿದ್ದಾರೆಯೇ; (ಜಿಲ್ಲಾವಾರು ವಿವರ ನೀಡುವುದು);

ಈ) 2011–12ನೇ ಸಾಲಿನಲ್ಲಿ ಡಯಾಲಿಸಿಸ್ ಯಂತ್ರಗಳ ಖರೀದಿ ಹಾಗೂ ನಿರ್ವಹಣೆಗಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಕೈಗೊಂಡ ಕ್ರಮಗಳೇನು ಹಾಗೂ ಇದಕ್ಕೆ ತಗಲುತ್ತಿರುವ ವೆಚ್ಚವೆಷ್ಟು; (ಜಿಲ್ಲಾವಾರು ವಿವರ ನೀಡುವುದು);

ಉ) ರಾಜ್ಯದಲ್ಲಿ 2011 ರಲ್ಲಿ ಡಯಾಲಿಸಿಸ್ ಚಿಕಿತ್ಸೆ ಪಡೆದ ರೋಗಿಗಳೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಡಿ.ವಿ. ಸದಾನಂದ ಗೌಡ (ಮುಖ್ಯಮಂತ್ರಿಗಳು):–

ಅ) ರಾಜ್ಯಾದ್ಯಂತ ಕಿಡ್ನಿ ವೈಫಲ್ಯದಿಂದ ಬಳುತ್ತಿರುವ ರೋಗಿಗಳ ಸಮೀಕ್ಷೆಯನ್ನು

ಪ್ರತ್ಯೇಕವಾಗಿ ಮಾಡಿರುವುದಿಲ್ಲ. ಆದರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಆಸ್ಪತ್ರೆಗಳಲ್ಲಿ ಪ್ರಸಕ್ತ ಸಾಲಿನಲ್ಲಿ (ಆಕ್ಟೋಬರ್–2011ರ ಅಂತ್ಯದವರೆಗೆ) ಕಿಡ್ನಿ ವೈಫಲ್ಯದಿಂದ 422 ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ. (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಆ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿನ ಆಸ್ಪತ್ರೆಗಳಲ್ಲಿ ಒಟ್ಟು 111 ಡಯಾಲಿಸಿಸ್ ಯಂತ್ರಗಳು ಕಾರ್ಯನಿರ್ವಹಿಸುತ್ತಿವೆ. (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಚಾಮರಾಜನಗರ, ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗಳಲ್ಲಿ ಮತ್ತು ಕೆ.ಸಿ. ಜನರಲ್ ಆಸ್ಪತ್ರೆ, ಬೆಂಗಳೂರು, ಇಲ್ಲಿ ಹೆಚ್.ಸಿ.ವಿ / ಹೆಚ್.ಐ.ವಿ ಸೋಂಕಿತ ರೋಗಿಗಳಿಗೆ ಪ್ರತ್ಯೇಕವಾಗಿ ಒಂದೊಂದು ಡಯಾಲಿಸಿಸ್ ಯಂತ್ರವನ್ನು ಕಾಯ್ದಿರಿಸಲಾಗಿದೆ.

ಇ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ತಾಲ್ಲೂಕು ಆಸ್ಪತ್ರೆಗಳ ಪೈಕಿ, ಸಾಗರ ಮತ್ತು ಹೊಸಕೋಟೆ ತಾಲ್ಲೂಕುಗಳಲ್ಲಿ ಮಾತ್ರ ಡಯಾಲಿಸಿಸ್ ಸೌಲಭ್ಯವಿದೆ.

ಡಯಾಲಿಸಿಸ್ ಯಂತ್ರಗಳ ನಿರ್ವಹಣೆ ಮಾಡಲು ತಜ್ಞ ವೈದ್ಯರು ಇರುವುದಿಲ್ಲ. ಆದರೆ, ಲಭ್ಯವಿರುವ ವೈದ್ಯರುಗಳು ಮತ್ತು ಸಿಬ್ಬಂದಿಗಳಿಗೆ ಸೂಕ್ತ ತರಬೇತಿ ನೀಡಿ ಕಾರ್ಯನಿರ್ವಹಿಸಲಾಗುತ್ತಿದೆ.

ಈ) 2011–12ನೇ ಸಾಲಿನಲ್ಲಿ ಡಯಾಲಿಸ್ ಯಂತ್ರಗಳು ಮತ್ತು ಪರಿಕರಗಳ ಖರೀದಿಗಾಗಿ ಒಟ್ಟು ರೂ. 2.92 ಕೋಟಿಗಳ (ಅಂದರೆ, ಪರಿಕರಗಳಿಗೆ ರೂ. 1.75 ಮತ್ತು ಯಂತ್ರಗಳ ಖರೀದಿಗಾಗಿ ರೂ. 1.17) ಅನುದಾನವನ್ನು ಆಸ್ಪತ್ರೆಗಳಿಗೆ ಬಿಡುಗಡೆ ಮಾಡಲಾಗಿದೆ. (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಉ) ರಾಜ್ಯದಲ್ಲಿ 2011 ರಲ್ಲಿ ಅಕ್ಟೋಬರ್ ವರೆಗೆ ಡಯಾಲಿಸಿಸ್ ಚಿಕಿತ್ಸೆ ಪಡೆದ ರೋಗಿಗಳ ಸಂಖ್ಯೆ ಒಟ್ಟು 422 (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ) ಸದರಿ ರೋಗಿಗಳಿಗೆ ಒಟ್ಟು 15051 ಸುತ್ತುಗಳ ಡಯಾಲಿಸಿಸ್ ಚಿಕಿತ್ಸೆ ನೀಡಲಾಗಿದೆ.

ಅನುಬಂಧ

ಕ್ರ.ಸಂ	ಜಿಲ್ಲೆ / ತಾಲ್ಲೂಕು / ಪ್ರಮುಖ ಆಸ್ಪತ್ರೆಗಳ ಹೆಸರು	ಡಯಾಲಿಸಿಸ್ ಯಂತ್ರಗಳ ಸಂಖ್ಯೆ	ಮಾಸಿಕ ಚಿಕಿತ್ಸೆ ಪಡೆದ ರೋಗಿಗಳ ಸಂಖ್ಯೆ	ರೋಗಿಗಳು ಡಯಾಲಿಸಿಸ್ ಚಿಕಿತ್ಸೆ ಪಡೆದ ಒಟ್ಟು ಸುತ್ತುಗಳ ಸಂಖ್ಯೆ	ಬಿಡುಗಡೆ ಮಾಡಿರುವ ಅನುದಾನ (ರೂ.ಲಕ್ಷಗಳಲ್ಲಿ)
1	ಚಿಕ್ಕಬಳ್ಳಾಪುರ	06	36	826	5.00
2	ಬಿಜಾಪುರ	06	50	1445	11.00
3	ಬಾಗಲಕೋಟೆ	06	13	458	8.00
4	ಕಾರವಾರ	06	09	306	5.00
5	ಚಿತ್ರದುರ್ಗ	06	30	1014	10.00
6	ಚಾಮರಾಜನಗರ	06	30	1275	13.00
7	ಚಿಕ್ಕಮಗಳೂರು	06	26	971	16.00
8	ತುಮಕೂರು	06	11	1700	16.00
9	ಕೋಲಾರ	06	30	974	11.00
10	ಧಾರವಾಡ	06	15	265	5.00
11	ಉಡುಪಿ	02	15	503	30.47
12	ಹಾವೇರಿ	06	13	289	17.89
13	ಗದಗ	06	15	289	9.00
14	ರಾಮನಗರ	06	18	28	8.00
15	ಕೆ.ಸಿ. ಜನರಲ್ ಆಸ್ಪತ್ರೆ, ಬೆಂಗಳೂರು	11	60	3165	20.00
16	ಜಯನಗರ ಸಾರ್ವಜನಿಕ ಆಸ್ಪತ್ರೆ, ಬೆಂಗಳೂರು	08	24	964	11.00
17	ಹೊಸಪೇಟೆ, ಸಾರ್ವಜನಿಕ ಆಸ್ಪತ್ರೆ,	06	14	484	6.00
18	ಸಾಗರ ಸಾರ್ವಜನಿಕ ಆಸ್ಪತ್ರೆ,	06	13	95	5.00
	ಒಟ್ಟು	111	422	15051	207.36

ಟಿಪ್ಪಣಿ: ಮಡಿಕೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಹೊಸದಾಗಿ ಪ್ರಾರಂಭಿಸುತ್ತಿರುವ ಡಯಾಲಿಸಿಸ್ ಕೇಂದ್ರಕ್ಕೆ ಅವಶ್ಯವಿರುವ ಯಂತ್ರೋಪಕರಣ ಹಾಗು ಸಿವಿಲ್ ಕಾಮಗಾರಿಗಳಿಗಾಗಿ ರೂ. 85 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಶ್ರೀ ಎಲ್.ಎ. ರವಿಸುಬ್ರಹ್ಮಣ್ಯ: ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದ್ದು ಈ ಉತ್ತರ ಅಷ್ಟು ಸಮರ್ಪಕವಾಗಿದೆ ಎಂದು ನನಗನ್ನಿಸುವುದಿಲ್ಲ. ರಾಜ್ಯದಲ್ಲಿ dialysis ತೊಂದರೆಗೆ ಒಳಗಾದ ರೋಗಿಗಳ ಬಗ್ಗೆ ಯಾವುದೇ ಸಮೀಕ್ಷೆ ಮಾಡಿಲ್ಲ. ಈಗ ರಾಜ್ಯದಲ್ಲಿ ಒಟ್ಟು 422 ರೋಗಿಗಳಿಗೆ ಚಿಕಿತ್ಸೆಯನ್ನು ಕೊಡುತ್ತಿದ್ದೇವೆಂದು ಹೇಳಿದ್ದಾರೆ. ಹಾಗೆಯೇ, ಇಡೀ ರಾಜ್ಯದಲ್ಲಿ 111 dialysis ಯಂತ್ರಗಳು ಇವೆಯೆಂದು ತಿಳಿಸಿದ್ದಾರೆ. ಚಾಮರಾಜನಗರ ಮತ್ತು ಚಿಕ್ಕಮಗಳೂರು, KC General Hospital ಇಲ್ಲಿ ಹೆಪಟೈಟಿಸ್ ಬಿ ಮತ್ತು HIV ಸೋಂಕಿನ ರೋಗಿಗಳಿಗೆ ಎರಡು ಯಂತ್ರಗಳನ್ನು separate ಆಗಿ ಇಟ್ಟಿದ್ದೇವೆಂದು ತಿಳಿಸಿದ್ದಾರೆ. ಇವತ್ತು ರಾಜ್ಯದಲ್ಲಿ ಹತ್ತಾರು ಸಾವಿರ ಸಂಖ್ಯೆಯಲ್ಲಿ dialysis ನಿಂದ ಬಳಲುತ್ತಿರುವ ರೋಗಿಗಳು ಇರುವ ಸಂದರ್ಭದಲ್ಲಿ ಇದನ್ನು ನೋಡಿದಾಗ ಬಹಳ ನಿರಾಶೆಯಾಗುತ್ತದೆ. Dialysis ನಿಂದ ತೊಂದರೆಗೊಳಗಾದಂಥ ರೋಗಿಗಳು ವಾರದಲ್ಲಿ 2 ರಿಂದ 3 ಸಲ treatment ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ಕೇವಲ 422 ರೋಗಿಗಳಿಗೆ treatment ಕೊಡುತ್ತಿದ್ದಾರೆಂದರೆ, ಖಂಡಿತವಾಗಿಯೂ ಇದು ಸಾಲುತ್ತಿಲ್ಲ. ಇಂಥ ಸಂದರ್ಭದಲ್ಲಿ ಸರ್ಕಾರ ವಿಶೇಷವಾದ ಗಮನ ಕೊಡಬೇಕು.

ಅಧ್ಯಕ್ಷರು: ನೀವು clarification ಕೇಳಬೇಕು.

ಶ್ರೀ ಎಲ್.ಎ. ರವಿಸುಬ್ರಹ್ಮಣ್ಯ: ಇದು ಬಹಳ ಗಂಭೀರವಾದ ಪ್ರಶ್ನೆ. ಈ ರೋಗಿಗಳಿಗೆ ಖಂಡಿತವಾಗಿಯೂ ಹಣ ಇರುವುದಿಲ್ಲ. ಆರ್ಥಿಕವಾಗಿ ತುಂಬಾ ದುರ್ಬಲವಾಗಿರತಕ್ಕಂಥವರಿಗೆ ಇಂಥ ಕಾಯಿಲೆ ಬಂದರೆ ಅವರು ಅನ್ನ ತಿನ್ನುವ ಹಾಗಿಲ್ಲ. ನೀರು ಕುಡಿಯುವ ಹಾಗಿಲ್ಲ, ಅವರ ಪರಿಸ್ಥಿತಿಯನ್ನು ಯಾರೂ ಕೇಳುವ ಹಾಗಿಲ್ಲ. ಇವತ್ತು ಎಷ್ಟೋ ಜನ ಬಡ ರೋಗಿಗಳು ಸರ್ಕಾರ ಕೊಡುತ್ತಿರುವ 400 ರೂಪಾಯಿಗಳ pension ನಿಂದ ಜೀವನ ನಡೆಸುವುದರ ಜೊತೆಗೆ ತಮಗೆ ಔಷಧಿಯನ್ನು ತೆಗೆದುಕೊಳ್ಳಬೇಕಾದಂಥ ಪರಿಸ್ಥಿತಿ ಇವತ್ತು ರಾಜ್ಯದಲ್ಲಿದೆ. ಹಾಗಿರಬೇಕಾದರೆ ಇವತ್ತು ಹೊಸಕೋಟೆ ಮತ್ತು ಸಾಗರ ತಾಲ್ಲೂಕು ಈ ಎರಡು ಕಡೆ ಮಾತ್ರ dialysis ಯಂತ್ರ ಇದೆಯೆಂದು ಹೇಳಿದ್ದಾರೆ. ಇವತ್ತು ರಾಜ್ಯದ ಪ್ರತಿಯೊಂದು ತಾಲ್ಲೂಕುಗಳಲ್ಲೂ dialysis ಯಂತ್ರಗಳನ್ನು ಇಡಬೇಕಾದಂಥ ಪರಿಸ್ಥಿತಿ ಇದೆ. 2010–11ನೇ ಸಾಲಿನಲ್ಲಿ 2 ಕೋಟಿ 92 ಲಕ್ಷ ರೂಪಾಯಿಗಳನ್ನು ಮಾತ್ರ ಇದಕ್ಕೆ ಮೀಸಲಾಗಿಟ್ಟಿದೆ ಎಂದು ಹೇಳಿದ್ದಾರೆ. ಇಷ್ಟು ಹಣ ಯಾವುದೇ ಕಾರಣಕ್ಕೂ ಸಾಲುವುದಿಲ್ಲ. ಇವತ್ತು ಸರ್ಕಾರ ಬೇರೆ ಬೇರೆ ಯೋಜನೆಗಳಿಗೆ ಸಾಕಷ್ಟು ಹಣವನ್ನು ವ್ಯಯ ಮಾಡುತ್ತಿದೆ.

ಯಾರು ನಿಜವಾಗಿಯೂ ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದಾರೆ, ಅಂಥ ರೋಗಿಗಳ ಆರೈಕೆಯ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಸರ್ಕಾರ ಸಹಾಯ ಹಸ್ತವನ್ನು ನೀಡಬೇಕು. ಪ್ರತಿಯೊಂದು ಭಾಗದಲ್ಲಿ ಸಾಕಷ್ಟು ಇಂಥ ಯಂತ್ರಗಳನ್ನು ಅಳವಡಿಸಿದರೆ ಸಹಾಯವಾಗುತ್ತದೆ. ಬೆಂಗಳೂರಿನಂಥ ಆಸ್ಪತ್ರೆಗಳಲ್ಲಿ ಕೇವಲ ಎರಡೇ ಎರಡು ಕಡೆ 85 ಜನರಿಗೆ ಮಾತ್ರ ಸರ್ಕಾರದಿಂದ ಕೊಡುತ್ತೇವೆಂದು ಹೇಳಿದ್ದಾರೆ. ಇವತ್ತು ಸಾವಿರಾರು ರೂಪಾಯಿ ಖರ್ಚಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಯವರು ಸಹೃದಯವಂತರು. ವಿಶೇಷವಾಗಿ ಇದರ ಕಡೆಗೆ ಗಮನ ಕೊಟ್ಟು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಶ್ರೀ ರವಿಯವರ ಆತಂಕಕ್ಕೆ ಧ್ವನಿಗೂಡಿಸುತ್ತಾ, 422 ರೋಗಿಗಳು dialysis ಸೇವೆಯನ್ನು ಸರ್ಕಾರದ ವತಿಯಿಂದ ಪಡೆದುಕೊಳ್ಳುತ್ತಿದ್ದಾರೆಂದು ಹೇಳುತ್ತಿದ್ದಾರೆ. ಬಹುಶ: ನಿಜವಾಗಿ ಬಡವರು ಯಾರು dialysis ಪಡೆದುಕೊಳ್ಳುವ ಅವಶ್ಯಕತೆ ಇದೆ, ಅವರಿಗೆ ಈ ಸೌಲಭ್ಯ ಇರುವಂಥ ಮಾಹಿತಿ ಇಲ್ಲದಿರುವುದಕ್ಕೆ ಇದೊಂದು ಸಂಕೇತ ಎಂದು ನಾನು ಭಾವಿಸಿಕೊಂಡಿದ್ದೇನೆ. ಮಾನ್ಯ ಅಧ್ಯಕ್ಷರೆ, ತಮ್ಮ ಬಳಿಗೆ ಆದರೂ ಬರಬಹುದು ಅಥವಾ ಇಲ್ಲಿ ಶಾಸಕರ ಕಛೇರಿಗಳಿಗೆ ವಾರಕ್ಕೆ ಕನಿಷ್ಠ ಪಕ್ಷ ಇಬ್ಬರು, ಮೂವರು ಬರುತ್ತಾರೆ, "ಸರ್, ಖಾಸಗಿ ಆಸ್ಪತ್ರೆಯಲ್ಲಿ dialysis ಗೆ 2000 ರೂ. ಕೊಡಬೇಕು, ಏನಾದರೂ ಸಹಾಯ ಮಾಡಿ" ಎಂದು ಬರುತ್ತಾರೆ. ಇಲ್ಲಿ ಕೇವಲ 422 ರೋಗಿಗಳು ಎಂದರೆ ಬಹುಶ: ಒಂದೊಂದು ವಿಧಾನಸಭಾ ಕ್ಷೇತ್ರದಲ್ಲಿ ತುಂಬಾ ಈ dialysis ಸೇವೆಯ ಅವಶ್ಯಕತೆ ಇದೆ. ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಬಹಳ ಕಡುಬಡವರಿದ್ದಾರೆ, ದಿನಗೂಲಿ ಆಧಾರದ ಮೇಲೆ ಜೀವನ ಮಾಡತಕ್ಕಂಥವರಿಗೆ ಇವತ್ತು dialysis ಅವಶ್ಯಕತೆ ಇದೆ. ಅವರ ಗೋಳನ್ನು ನಾವಂತೂ ನೋಡಲಿಕ್ಕೆ ಆಗುತ್ತಿಲ್ಲ. ಖಾಸಗಿ ಆಸ್ಪತ್ರೆಗಳಲ್ಲಿ ಒಂದು dialysis ಗೆ 2000 ರೂಪಾಯಿಗಳನ್ನು ಚಾರ್ಜ್ ಮಾಡುತ್ತಾರೆ. ಸರ್ಕಾರ ಇದನ್ನು ವಿಶೇಷವಾಗಿ ತೆಗೆದುಕೊಂಡು ಹೆಚ್ಚಿನ dialysis ಕೇಂದ್ರಗಳನ್ನು ಎಲ್ಲ ಕಡೆಯಲ್ಲಿ ತೆರೆಯಬೇಕು. ವಿಶೇಷವಾಗಿ ಬೆಂಗಳೂರಿನಲ್ಲೂ ಸಹ ಬೇರೆ ಕಾಯಿಲೆ ಜೊತೆಗೆ ಈ ಕಾಯಿಲೆ ಸಹಜವಾದಂಥ ಕಾಯಿಲೆಗಳು ಆಗಿಬಿಟ್ಟಿವೆ. ಇವು ಬಹಳ ವಿರಳವಾದಂಥ ಕಾಯಿಲೆಗಳಾಗಿ ಉಳಿದಿಲ್ಲ. ಹೆಚ್ಚಿನ ಜನ ಕಷ್ಟ ಅನುಭವಿಸುತ್ತಿರುವುದರಿಂದ ವಿಶೇಷವಾಗಿ dialysis ಕೇಂದ್ರವನ್ನು ತೆರೆಯಬೇಕು.

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ: ಮಾನ್ಯ ಮುಖ್ಯಮಂತ್ರಿಯವರೆ, ಒಂದ್ನಿಮಿಷ ದಯಮಾಡಿ ಪರಿಶೀಲಿಸಬೇಕು. ನಮ್ಮ ರಾಯಚೂರು ಜಿಲ್ಲೆಯ ಆಸ್ಪತೆಗಳಲ್ಲಿ ಒಂದೂ ಸಹ dialysis ಕೇಂದ್ರ ಇಲ್ಲ. ಹೈದರಾಬಾದ್ ಕರ್ನಾಟಕದ ಯಾವ ಆಸ್ಪತ್ರೆಗಳಲ್ಲೂ ಇಲ್ಲ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು): ನಿಜ. ಇವರ ಆತಂಕಗಳಿಗೆ ನನ್ನ ಸಹಮತ ಕೂಡ ಇದೆ. ನಾನು ಖಂಡಿತವಾಗಿ ಹೇಳುತ್ತೇನೆ. ಆದರೆ, ಸರ್ಕಾರಿ ಜಿಲ್ಲಾ ಆಸ್ಪತ್ರೆಗಳಲ್ಲಿ ಮತ್ತು ತಾಲ್ಲೂಕು ಕೇಂದ್ರಕ್ಕೆ dialysis centre ಅನ್ನು extend ಮಾಡಿದಂಥ ಯಾವುದಾದರೂ ರಾಜ್ಯವಿದ್ದರೆ ಅದು ಕರ್ನಾಟಕ ರಾಜ್ಯ ಇಡೀ ದೇಶದಲ್ಲಿಯೇ ಪ್ರಥಮ ಎಂದು ಹೇಳುವುದನ್ನು ನಾವೆಲ್ಲ ಒಪ್ಪಿಕೊಳ್ಳಲೇಬೇಕು. ಇದು ಪ್ರಥಮ. ಯಾವುದೇ district hospitals ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಯಾವ ರಾಜ್ಯದಲ್ಲಿಯೂ ಇಲ್ಲ. ಆದರೆ, ಕರ್ನಾಟಕ ರಾಜ್ಯ, ನಮ್ಮ ಸರ್ಕಾರ ಅದನ್ನು ಪ್ರಾರಂಭ ಮಾಡಿದೆ. ನಿಜ. ನಾವು ಈಗಾಗಲೇ ತಿಳಿದುಕೊಂಡ ಪ್ರಕಾರ, 3 ಜಿಲ್ಲೆಗಳನ್ನು ಬಿಟ್ಟರೆ ಬೇರೆ ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ಇದೆ. ನಮ್ಮ ಸಭಾಧ್ಯಕ್ಷರ ಜಿಲ್ಲೆಗೆ ಈಗಾಗಲೇ ನಾವು ಸುಮಾರು 85 ಲಕ್ಷ ರೂಪಾಯಿಗಳನ್ನು ಒದಗಿಸಿಕೊಟ್ಟಿದ್ದೇವೆ. Civil ಕಾಮಗಾರಿ ಎಲ್ಲಾ ನಡೆಯುತ್ತಿದೆ. ಆದಷ್ಟು ಶೀಘ್ರ... ..

ಶ್ರೀ ಎಂ.ಪಿ. ಅಪ್ಪಚ್ಚುರಂಜನ್: ಮಾನ್ಯ ಸಭಾಧ್ಯಕ್ಷರೆ,

ಶ್ರೀ ಡಿ.ವಿ. ಸದಾನಂದಗೌಡ: ತಾವು ಕುಳಿತುಕೊಳ್ಳಿ. ನಿಮ್ಮ ಜಿಲ್ಲೆಗೇ ಕೊಟ್ಟಿದ್ದೇವೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್: ಜನತೆಯ ಪರವಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು): Thank you. ಯಾದಗಿರಿ ಜಿಲ್ಲೆಯಲ್ಲಿ ತಾಲ್ಲೂಕು ಆಸ್ಪತ್ರೆ ಕಟ್ಟಡವಿದ್ದ ಕಾರಣ ಅಲ್ಲಿ ಜಾಗಕ್ಕೆ ಸ್ವಲ್ಪ ಅವಕಾಶವಿಲ್ಲದ ಕಾರಣ ಅಲ್ಲಿ ತೊಂದರೆಯಾಗಿದೆ. ಅದನ್ನೂ ಕೂಡ ನೋಡುತ್ತಿದ್ದೇವೆ. ಕೊಪ್ಪಳ ಆಸ್ಪತ್ರೆ ಕಟ್ಟಡ ರಚನೆ ಆಗುತ್ತಿದೆ. ಕಟ್ಟಡ ರಚನೆ ಆದ ತಕ್ಷಣ dialysis centre open ಮಾಡುತ್ತೇವೆ. ಎರಡು ತಾಲ್ಲೂಕುಗಳಲ್ಲಿ ಅಂದರೆ ಸಾಗರ ಮತ್ತು ಹೊಸಪೇಟೆಯಲ್ಲಿ ಈಗಾಗಲೇ dialysis ಸೌಲಭ್ಯವನ್ನು ಒದಗಿಸಿದ್ದೇವೆ. BPL card-holders ಯಾರಿದ್ದಾರೆ, ಅವರಿಗೆ ಉಚಿತವಾದಂಥ dialysis ಸೌಲಭ್ಯ ಕೊಡುವ ವ್ಯವಸ್ಥೆಯನ್ನು ನಮ್ಮ ರಾಜ್ಯ ಸರ್ಕಾರ ಮಾಡಿದೆ. ಶ್ರೀ ಕೃಷ್ಣ ಬೈರೇಗೌಡರವರು ಹೇಳಿದ ರೀತಿಯಲ್ಲಿ outside ನಲ್ಲಿ ಸುಮಾರು

ಒಂದು ಸಾವಿರ, ಸಾವಿರದ ಮುನ್ನೂರು, ಎರಡು ಸಾವಿರ ರೂಪಾಯಿಗಳವರೆಗೆ ರೇಟ್ ಇದೆ. APL card ಹೊಂದಿರುವರಿಗೆ ರಾಜ್ಯದಲ್ಲಿ ನಾವು 350 ರೂಪಾಯಿಗಳಲ್ಲಿ ಚಿಕಿತ್ಸೆಯನ್ನು ಒದಗಿಸಿಕೊಡುವ ಕಾರ್ಯವನ್ನು ಮಾಡಿದ್ದೇವೆ. ಈಗಾಗಲೇ ಹಲವಾರು ಕಡೆಗಳಲ್ಲಿ ಇದನ್ನು extend ಮಾಡಬೇಕೆನ್ನುವ ಇರಾದೆ ಸರ್ಕಾರದ ಮುಂದಿದೆ. ನಿಜ. ಶ್ರೀ ರವಿಸುಬ್ರಹ್ಮಣ್ಯರವರು ಹೇಳಿದ ರೀತಿಯಲ್ಲಿ ಇಡೀ ರಾಜ್ಯದಲ್ಲಿ ಈ ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದಾರೆನ್ನುವವರ ಸಮೀಕ್ಷೆಯನ್ನು ಮಾಡಲಿಲ್ಲ. ಆದರೆ, ಸರ್ಕಾರಕ್ಕಿರುವ ಅಂಕಿಅಂಶಗಳ ಪ್ರಕಾರ ಸುಮಾರು 15,051 ರೋಗಿಗಳು dialysis ಚಿಕಿತ್ಸೆ ಪಡೆದಿದ್ದಾರೆನ್ನುವ ಮಾಹಿತಿ ಲಭ್ಯವಿದೆ. ಸರ್ಕಾರದಿಂದ ಮಾಸಿಕ ಚಿಕಿತ್ಸೆ ಪಡೆದ ರೋಗಿಗಳ ಸಂಖ್ಯೆ ಸುಮಾರು 422. ಇದು ನಮಗೆ ಸಿಕ್ಕಿದ ಅಂಕಿಅಂಶಗಳ ಪ್ರಕಾರ ಇದೆ. ಈ ಮಾಹಿತಿ ನಮ್ಮ ಕೈಯಲ್ಲಿದೆ. ವಿಶೇಷವಾಗಿ ನಾನು ಹೇಳುವುದೇನೆಂದರೆ, ಇವತ್ತು ಒಂದು dialysis centre ಸ್ಥಾಪನೆ ಮಾಡಬೇಕಾದರೆ ಕನಿಷ್ಠ 65 ಲಕ್ಷ ರೂ. ಬೇಕಾಗುತ್ತದೆ. ಅದರಲ್ಲಿ Nephrology ತಜ್ಞರ ಅವಶ್ಯಕತೆ ಇದೆ. super speciality ಯ ಕೊರತೆ ಇರುವ ಕಾರಣ ನಮಗೆ ಸ್ವಲ್ಪ problem ಆಗಿರುವುದು ನಿಜ. ಸರ್ಕಾರ ಏನು ಮಾಡಿದೆ ಎಂದರೆ ಈ ರೀತಿಯ dialysis ಚಿಕಿತ್ಸೆ ಕೊಡಲಿಕ್ಕೆ ಬೇಕಾದಂಥ ವಿಶೇಷ ತರಬೇತಿಯನ್ನು ಅಲ್ಲಿರುವ ಡಾಕ್ಟರುಗಳಿಗೆ ಕೊಡುವಂಥ ಕೆಲಸವನ್ನು ಈಗಾಗಲೇ ಮಾಡಿ ಇದ್ದದ್ದನ್ನು ಸದ್ವಿನಿಯೋಗ ಮಾಡುವ ಕಾರ್ಯವನ್ನು ನಾವು ಈಗಾಗಲೇ ಮಾಡಿದ್ದೇವೆ. ಉಳಿದ ಭಾಗಗಳಲ್ಲಿ ಕೂಡ ಇದನ್ನು ವಿಸ್ತರಣೆ ಮಾಡಬೇಕೆಂದು ನಮ್ಮ ಗಮನದಲ್ಲಿದೆ. HIV ಸೋಂಕು ಪೀಡಿತರಿಗೆ ಏನು ಮಾಡುತ್ತಿದ್ದೀರಿ ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಪ್ರಾಯಶ: ಮೂರು ಕಡೆ ಪ್ರತ್ಯೇಕ ಪ್ರತ್ಯೇಕವಾಗಿ ವಿಶೇಷವಾಗಿ HIV ಪೀಡಿತರಿಗೆ ಬೇಕಾದ ಲಭ್ಯತೆಗಳನ್ನು ಕೊಡಲಿಕ್ಕೆ ಚಾಮರಾಜನಗರ, ಚಿಕ್ಕಮಗಳೂರಿನ ಜಿಲ್ಲಾಸ್ಪತ್ರೆ, K.C.General Hospital, Bangalore ಇಲ್ಲಿ ಈಗಾಗಲೇ ಪ್ರತ್ಯೇಕವಾದ dialysis ಯಂತ್ರವನ್ನು ಕಾಯ್ದಿರಿಸುವ ಕಾರ್ಯವನ್ನು ಮಾಡಲಾಗಿದೆ. ಬೇರೆ ಕಡೆ ಕೂಡ ಬೇಕೆನ್ನುವ ಬೇಡಿಕೆ ಇದೆ. ಇದರ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಿಕ್ಕೆ ಸರ್ಕಾರ ಸಿದ್ಧವಿದೆ.

(ಗೊಂದಲ)

ಅಧ್ಯಕ್ಷರು: ಎಲ್ಲರೂ ಒಟ್ಟಿಗೆ ಕೇಳಿದರೆ ಹೇಗೆ? ಸಿ.ಟಿ.ರವಿಯವರೆ, ಉಪಪ್ರಶ್ನೆ ಕೇಳಿ.

ಶ್ರೀ ಎಂ.ಬಿ. ಪಾಟೀಲ: ಹೈದರಾಬಾದ್–ಕರ್ನಾಟಕದ ಕಡೆಗೂ ಗಮನಹರಿಸಬೇಕು.

ಶ್ರೀ ವೆಂಕಟರಾವ್ ನಾಡಗೌಡ: ತಾವು ಅಂಕಿಅಂಶಗಳನ್ನು ತರಿಸಿ ನೋಡಿ. HIV ಸೋಂಕುಪೀಡಿತರು highest ಇರುವುದು ನಮ್ಮ ಭಾಗದಲ್ಲಿ. ಅಲ್ಲೂ ಕೂಡ dialysis ಕೇಂದ್ರ ಬೇಕು. ರಾಯಚೂರು ಜಿಲ್ಲೆಯಲ್ಲಿ ಅತಿ ಹೆಚ್ಚು HIV ರೋಗಿಗಳು ಇದ್ದಾರೆ. ಆ ಜಿಲ್ಲೆಯನ್ನೂ ಸೇರಿಸಿಕೊಳ್ಳಬೇಕು.

ಅಧ್ಯಕ್ಷರು: ನಾನು ಶ್ರೀ ಸಿ.ಟಿ. ರವಿಯವರನ್ನು ಕರೆದಿದ್ದೇನೆ.

ಶ್ರೀ ಸಿ.ಟಿ. ರವಿ: ಕಿಡ್ನಿ ವೈಫಲ್ಯದಿಂದ 422 ಜನ ಬಳಲುತ್ತಿದ್ದಾರೆಂದು ಅವರಿಗೆ ಸಿಕ್ಕಿರುವ ಮಾಹಿತಿ ಹೇಳಿದ್ದಾರೆ. ಆದರೆ, ಕಿಡ್ನಿ ವೈಫಲ್ಯ ದೊಡ್ಡ ಪ್ರಮಾಣದಲ್ಲಿದೆ. ಈ Unit ಗಳು ಸಾಕಾಗುತ್ತಿಲ್ಲ. ಚಿಕ್ಕಮಗಳೂರಿನಲ್ಲಿ ಆರು Unit ಇದ್ದು, ಆ ಆರೂ ಯೂನಿಟ್‌ಗಳಲ್ಲಿ ಜನ ಕ್ಯೂ ಇರುತ್ತಾರೆ. ಅವರನ್ನು overlook ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ, ಯೂನಿಟ್‌ಗಳ ಸಂಖ್ಯೆ ಜಾಸ್ತಿ ಮಾಡಬೇಕು. ಕಿಡ್ನಿ ವೈಫಲ್ಯಕ್ಕೆ ಮೂಲ ಕಾರಣ ಏನು ಎನ್ನುವುದನ್ನು ಸಂಶೋಧನೆ ಮಾಡಬೇಕಾದ ಅವಶ್ಯಕತೆ ಇದೆ. ನಮಗೆ ಬಂದಿರುವ ಮಾಹಿತಿ ಪ್ರಕಾರ ನಿರಂತರ ಮಾತ್ರೆ ಸೇವನೆಯಿಂದ ಕಿಡ್ನಿ ವೈಫಲ್ಯವಾಗುತ್ತದೆ ಹೇಳುತ್ತಿದ್ದಾರೆ. ಅಲೋಪತಿ tablets ತೆಗೆದುಕೊಂಡರೆ ಕಿಡ್ನಿ ವೈಫಲ್ಯ ಆಗುತ್ತದೆ ಮತ್ತು ವಿಷಪೂರಿತ ಮತ್ತು ಕಲಬೆರಕೆ ಆಹಾರ ಸೇವನೆಯಿಂದ ಕಿಡ್ನಿ ವೈಫಲ್ಯವಾಗುತ್ತದೆಂದು ಹೇಳುತ್ತಾರೆ. ಈ ಮಾಹಿತಿ ನಿಜವೇ? ಹಾಗಿದ್ದರೆ, ಅದರ ನಿಯಂತ್ರಣಕ್ಕೆ ಸರ್ಕಾರದ ಕ್ರಮ ಏನು?

ಶ್ರೀ ಗೋಪಾಲಕೃಷ್ಣ ಬೇಳೂರು: ನಮ್ಮ ತಾಲ್ಲೂಕಿಗೆ dialysis ಯಂತ್ರ ಕೊಟ್ಟಿದ್ದಾರೆ. ಅದಕ್ಕೆ ಸರ್ಕಾರವನ್ನು ಅಭಿನಂದಿಸುತ್ತೇನೆ. ಆದರೆ, ಆ ಯಂತ್ರ ಬಂದು ಆರು ತಿಂಗಳಾಗಿದ್ದು, ಹಾಳಾಗುತ್ತಿದೆ, ಅಲ್ಲಿಗೆ ಬೇಕಾದ ತಜ್ಞರಿಲ್ಲ. ಆ ಯಂತ್ರಕ್ಕೆ 45 ಲಕ್ಷ ರೂಪಾಯಿ ಆಗಿದೆ. ಉಪಯೋಗ ಮಾಡದೆ ಹಾಳಾಗುವುದರಿಂದ ಆದಷ್ಟು ಬೇಗ ತಜ್ಞರನ್ನು ನೇಮಿಸುವ ಕೆಲಸ ಆಗಬೇಕು.

ಶ್ರೀ ನೆ.ಲ. ನರೇಂದ್ರ ಬಾಬು: ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿಸುವುದೇನೆಂದರೆ, ಸರ್ಕಾರದ ವ್ಯವಸ್ಥೆಯಲ್ಲಿ ರೋಗಿಗಳಿಗೆ ಸಂಪೂರ್ಣ dialysis ಮಾಡಲಿಕ್ಕೆ ಆಗುವುದಿಲ್ಲ. ದಯವಿಟ್ಟು ಒಂದು ರೇಟ್ ಫಿಕ್ಸ್ ಮಾಡಿ. private Medical Colleges, private institutions, services ನಲ್ಲಿ ಪ್ರತಿ ದಿನ ಯದ್ವಾತದ್ವಾ

rate ಮಾಡುತ್ತಾರೆ. ಹಿಂದೆ ಮಾನ್ಯ ಅಶೋಕ್‌ರವರು ಆ ಖಾತೆಯ ಸಚಿವರಾಗಿದ್ದಾಗ ಇದರ ನಿಯಂತ್ರಣದ ಬಗ್ಗೆ ಕಾನೂನು ಜಾರಿಗೆ ತರುತ್ತೇವೆಂದು ಹೇಳಿದ್ದರು, ಆದರೆ, ತರಲಿಲ್ಲ. ಸಂಪೂರ್ಣ ಸರ್ಕಾರವನ್ನೇ ನಂಬುವುದಕ್ಕಾಗುವುದಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಗಮನಹರಿಸಬೇಕು. ಖಾಸಗಿ ಆಸ್ಪತ್ರೆಗಳಿಗೆ ಹೋದರೆ five-star rate ಹಾಕುತ್ತಾರೆ. ಬಡವರಿಗೆ ಬೇರೆ ದಾರಿ ಇಲ್ಲ. ದಯವಿಟ್ಟು ಅದರ ಬಗ್ಗೆ ಗಮನಹರಿಸಿ. ಸರ್ಕಾರ ರೇಟ್ ಅನ್ನು fix ಮಾಡಬೇಕು.

ಅಧ್ಯಕ್ಷರು: ಈ ರೀತಿ ಎಲ್ಲರೂ ಮಾತನಾಡುತ್ತಾ ಹೋದರೆ ಇದು ಪ್ರಶ್ನೋತ್ತರ ಆಗುವುದಿಲ್ಲ.

ಶ್ರೀ ಬಿ. ರಮಾನಾಥ ರೈ: ಪ್ರಶ್ನೆ ಕೇಳಲಿ. ಈ ವಿಷಯದ ಹಿಂದೆ ಒಳ್ಳೆಯ ಉದ್ದೇಶವಿದೆ.

ಶ್ರೀ ಕೆ.ಜಿ. ಕುಮಾರಸ್ವಾಮಿ: ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ 10 units ಇವೆ. ಆದರೆ, ಅಧಿಕಾರಿಗಳು ಮಾನ್ಯ ಮುಖ್ಯಮಂತ್ರಿಯವರಿಗೆ ತಪ್ಪು ಮಾಹಿತಿ ಕೊಟ್ಟಿದ್ದಾರೆ. ಇದರಲ್ಲಿ ಶಿವಮೊಗ್ಗದ ಹೆಸರಿಲ್ಲ. ಅಲ್ಲಿ ಹತ್ತು ಯೂನಿಟ್ಸ್ ಇದೆ. ಅಲ್ಲಿ technicians ಕೊರತೆ ಇದೆ. Technicians ಹುದ್ದೆ ಭರ್ತಿ ಮಾಡಬೇಕು.

ಶ್ರೀ ಎಲ್.ಎ. ರವಿ ಸುಬ್ರಹ್ಮಣ್ಯ: ಅಂಗಾಂಗ ಕಸಿ ಮಾಡುವುದಕ್ಕೆ ಮೂರು ಭಾಗಗಳಲ್ಲಿ permission ತೆಗೆದುಕೊಳ್ಳಬೇಕೆಂದು Act ಇದೆ. ಹೆಂಡತಿಯಿಂದ ಗಂಡನಿಗೆ kidney transplant ಮಾಡುವುದಕ್ಕೆ permission ಕೇಳಿದರೆ 6 ತಿಂಗಳಾದರೂ permission ಸಿಗುತ್ತಿಲ್ಲ. ಇಷ್ಟು ದಿವಸಗಳಲ್ಲಿ permission ಕೊಡುತ್ತೇವೆಂದು ಇದಕ್ಕೆ time-bound fix ಮಾಡಬೇಕು. ಈ ರೋಗದಿಂದ ನರಳುತ್ತಿರುವವರಿಗೆ 6 ತಿಂಗಳಾದರೂ permission ಸಿಗದಿದ್ದರೆ ಹೇಗೆ? ದಯವಿಟ್ಟು ಇದರ ಬಗ್ಗೆ ಗಮನಹರಿಸಬೇಕು.

ಶ್ರೀ ಗೊಳಿಹಟ್ಟಿ ಡಿ. ಶೇಖರ್: ಆಸ್ಪತ್ರೆಗಳಲ್ಲಲಿ dialysis ಮಾಡುತ್ತಾರೆ. ಆದರ ಜೊತೆಗೆ ತಲಸೇಮಿಯಾ ಎನ್ನುವ ರೋಗ ಸಣ್ಣ ಮಕ್ಕಳಿಗೆ ಅಂದರೆ 1 ವರ್ಷದಿಂದ 4 ವರ್ಷದ ಮಕ್ಕಳಿಗೆ ಪ್ರತಿ ತಿಂಗಳು blood transfer ಮಾಡಬೇಕಾಗುತ್ತದೆ. ಅದಕ್ಕೂ ಕೂಡ ತಾಲ್ಲೂಕು ಜಿಲ್ಲಾ ಆಸ್ಪತ್ರೆಗಳಲ್ಲಿ ವ್ಯವಸ್ಥೆ ಬೇಕು.

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ, ನಾನು ಡಾ: ಹೆಚ್.ಸಿ. ಮಹಾದೇವಪ್ಪರವರನ್ನು ಕರೆದಿದ್ದೇನೆ.

ಶ್ರೀ ಇ. ತುಕಾರಾಂ: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ಬೇರೆ ರೂಪದಲ್ಲಿ ಚರ್ಚೆಗೆ ತನ್ನಿ.

ಶ್ರೀ ಇ. ತುಕಾರಾಂ: ಕುಡಿಯುವ ನೀರಿನಿಂದ kidney fail ಆಗುವುದು ಬಹಳ major ಇದೆ. ಮಾನ್ಯ ರವಿಯವರು ಹೇಳಿದ ಹಾಗೆ...

ಗೊಂದಲ

ಅಧ್ಯಕ್ಷರು: ಅವರು ಹೇಳಿದ್ದನ್ನೇ ನೀವು ಹೇಳಬೇಕಾಗಿಲ್ಲ.

ಶ್ರೀ ಇ. ತುಕಾರಾಂ: ಶಾಸಕರ ಅನುದಾನದಲ್ಲಿ ಮಾನ್ಯ ಮುಖ್ಯಮಂತ್ರಿಯವರು provision ಮಾಡಬೇಕೆಂದು ಕೇಳುತ್ತೇನೆ. At least ಗ್ರಾಮಪಂಚಾಯಿತಿ level ನಲ್ಲಿ ಒಂದು water treatment plant ಹಾಕಿದರೆ ಅನುಕೂಲವಾಗಬಹುದೆಂದು ನನ್ನ ಅನಿಸಿಕೆ.

ಡಾ: ಹೆಚ್.ಸಿ. ಮಹಾದೇವಪ್ಪ: ಮಾನ್ಯ ಮುಖ್ಯಮಂತ್ರಿವರಿಗೆ, ಸರ್ಕಾರಕ್ಕೆ ಮಾನ್ಯ ಸದಸ್ಯರು ಪ್ರಮುಖವಾದ ಕಿಡ್ನಿ ರೋಗಕ್ಕೆ ಸಂಬಂಧಪಟ್ಟ ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಸರ್ಕಾರದವರು ಉತ್ತರ ಒದಗಿಸಿ ಕೊಟ್ಟಿದ್ದಾರೆ. ದೇಶದಲ್ಲಿ ಮತ್ತು ಸರ್ಕಾರದಲ್ಲಿ ಆರೋಗ್ಯ ಎನ್ನುವುದು ತುಂಬಾ priority area. ಅದಕ್ಕೆ priority ಯನ್ನು ಸರ್ಕಾರವೂ ಮಾಡಬೇಕು. ಈ ಮನೆಯಲ್ಲಿ ನನ್ನನ್ನೂ ಯಾರೂ ಕೂಡ Renal specialist ಒಬ್ಬರೂ ಇಲ್ಲ. kidney ಕಾಯಿಲೆ ಇದರಿಂದ ಬರುತ್ತದೆ, ಆದರಿಂದ ಬರುತ್ತದೆ. ಎಂದು ಹೆಳುತ್ತಾರೆ. Let us not go the cause of disease. How to tackle the disease is matter of concern. ಕೇಂದ್ರ ಸರ್ಕಾರ ಮತ್ತು ವಿಶ್ವ ಬ್ಯಾಂಕ್ ಯೋಜನೆ ಕೆಳಗಡೆ ಕರ್ನಾಟಕಕ್ಕೆ ...

ಅಧ್ಯಕ್ಷರು: ಇದಕ್ಕೆ ಸಂಬಂಧಪಟ್ಟ ಪ್ರಶ್ನೆ ಕೇಳಿ. ಇಡೀ ಯೋಜನೆ ಬಗ್ಗೆ ಹೇಳುತ್ತಾ ಹೋದರೆ ಹೇಗೆ ?

ಡಾ: ಹೆಚ್.ಸಿ ಮಹದೇವಪ್ಪ: ಒಂದೆರಡು ಸಲಹೆಗಳು ಕೊಡುತ್ತೇನೆ ಮಾನ್ಯ ಅಧ್ಯಕ್ಷರೆ. Primary, Secondary and tertiary ಈ ಮೂರು ಆರೋಗ್ಯ ಕ್ಷೇತ್ರಗಳಿಗೆ ಯೋಜನೆಯನ್ನು ಮಂಜೂರು ಮಾಡಿಕೊಟ್ಟಿದ್ದಾರೆ.

ಅಧ್ಯಕ್ಷರು: ಈ scheme ಎಲ್ಲರಿಗೂ ಗೊತ್ತಿದೆ.

ಡಾ: ಹೆಚ್.ಸಿ ಮಹದೇವಪ್ಪ: ಮಂಜೂರು ಮಾಡಿಕೊಟ್ಟಿರುವಾಗ ಅವರಿಗೆ ಬೇಕಾದಂಥ sub-divisional hospital, taluk hospital, District hospital ಎಂದು upgrade ಮಾಡಿದೆವು. upgrade ಮಾಡಿದಾಗ ಆ bed ಸಂಖ್ಯೆಗೆ ಅನುಗುಣವಾಗಿ ಅಯವ್ಯಯವನ್ನು ಮಂಜೂರು ಮಾಡುತ್ತಿದ್ದೇವೆಯೋ, ಇಲ್ಲವೋ? ಅದಕ್ಕೆ ಬೇಕಾದಂಥ ಸಿಬ್ಬಂದಿಗಳು ಇದ್ದಾರೋ, ಇಲ್ಲವೋ? ಅದಕ್ಕೆ ಬೇಕಾದಂಥ ಔಷಧಿಗಳು ಅಭ್ಯವಿದೆಯೋ, ಇಲ್ಲವೋ? ಇದನ್ನು streamline ಮಾಡದೆ, ಸೀಮಿತವಾದ ಪ್ರಶ್ನೆಗೆ ಉತ್ತರ ಕೊಟ್ಟು ಇಂಥ ಪ್ರಮುಖವಾದ ಜವಾಬ್ದಾರಿಯಿಂದ ಸರ್ಕಾರವಾಗಲಿ ಅಥವಾ ಸದಸ್ಯರಾಗಲಿ ಸುಮ್ಮನಿರಬಾರದು, ಏಕೆಂದರೆ ಅರೋಗ್ಯಕ್ಕೆ treatment ತುಂಬಾ ದುಬಾರಿಯಾಗುತ್ತಿದೆ. ಬಹಳ ಹಿಂದೆಯೇ ಮೇಲ್ಮನೆಯಲ್ಲಿ...

ಅಧ್ಯಕ್ಷರು: ಅದಕ್ಕೆ ಉತ್ತರ ಹೇಳಿದ್ದಾರೆ APL card -holders ಗೆ 350 ರೂ. ಗಳಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ. ಪುನಃ ಏಕೆ ಕೇಳುತ್ತೀರಿ ?

ಡಾ: ಹೆಚ್.ಸಿ. ಮಹಾದೇವಪ್ಪ: Private Medical Establishments Bill introduce ಮಾಡಿದ್ದೇವು. ಖಾಸಗಿಯವರು ಕೂಡ 25% ಬಡ ರೋಗಿಗಳಿಗೆ free ಆಗಿ ಅಲ್ಲಿ ಚಿಕಿತ್ಸೆ ಕೂಡಬೇಕು.

ಅಧ್ಯಕ್ಷರು: Free ಎಂದು ಹೇಳಿದ್ದಾರಲ್ಲಾ ಬಿಡಿ.

ಡಾ: ಹೆಚ್.ಸಿ. ಮಹಾದೇವಪ್ಪ: ನಾನು ಏನು ಹೇಳುತ್ತೇನೆಂದರೆ, ಈ ಆಸ್ಪತ್ರೆ ಆಪ್‌ಗ್ರೇಡ್ ಆಗಿ 100 ಬೆಡ್ ಆಸ್ಪತ್ರೆಯಾಗಿರುವ ತಾಲ್ಲೂಕು. 30 ಬೆಡ್‌ದು ಬಡ್ಜೆಟ್ ಕೊಡುತ್ತಾರೆ., ಅಷ್ಟೇ ಸೀಮಿತವಾದ ಸಿಬ್ಬಂದಿ ಇದ್ದಾರೆ. Essential and life saving drugs must be available in all the government hospitals. ಅದನ್ನು ನೀವು ಪಾಲಿಸಿ ಮಾಡದೇ ಹೋದರೆ ಬಡಜನರಿಗೆ ಕಷ್ಟವಾಗುತ್ತದೆ. ನಾನು ಈ ಹಿಂದೆ ಮಂತ್ರಿಯಾಗಿದ್ದಾಗ ಮಾಡ್ದಿದೆ. What I wanted to say is ; ಮಾನ್ಯ ಮುಖ್ಯಮಂತ್ರಿಗಳೇ, Essential and life saving drugs in 24 hours must available in all the government hospitals. ನೀವು ಆದೇಶ ಹೊರಡಿಸದಿದ್ದರೆ ಎಲ್ಲಾ ಬಡಜನರು ಅಲ್ಲಿಂದ ಇಲ್ಲಗೆ ಇಲ್ಲಿಂದ ಅಲ್ಲಿಗೆ ಓಡಾಡಿಕೊಂಡು ಇರುತ್ತಾರೆ.

ಶ್ರೀ ಡಿ.ವಿ. ಸದಾನಂದ ಗೌಡ : ಮಾನ್ಯ ಮಹಾದೇವಪ್ಪನವರೆ, BPL card - holder ಗೆ ಉಚಿತ ಡಯಾಲಿಸಿಸ್ ಸೌಲಭ್ಯ ಈ ಸರ್ಕಾರ ಒದಗಿಸಿ ಕೊಡುತ್ತದೆ ಎಂದು ನಾನು ಈಗಾಗಲೇ ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದೇನೆ. ಎರಡನೆಯದ್ದಾಗಿ APL ನವರಿಗೆ ರೂ. 350/– ಸೌಲಭ್ಯ ಕೊಡುತ್ತಿದ್ದೇವೆ.

ಶ್ರೀ ಸಿ.ಎಸ್. ಪುಟ್ಟೇಗೌಡ : APL card ಏಕೆ ಮಾನದಂಡ ಮಾಡುತ್ತೀರಿ ? ಅದು ಬೇಡ ಅದರ ಬದಲು ತಹಶೀಲ್ದಾರ್ ಕಡೆಯಿಂದ ಇನ್‌ಕಂ ಸರ್ಟಿಫಿಕೇಟ್ ತರಲಿಕ್ಕೆ ಹೇಳಿ. APL card ಆಧಾರ ದಯಾಮಾಡಿ, ಮಾಡಬೇಡಿ ಬೇಕಾದರೆ income ಆಧಾರ ಮಾಡಿಕೊಳ್ಳಿ BPL card ಕೊಡುವಲ್ಲಿ ದೋಖಾ ಮಾಡಿಲ್ಲವೆ ಗೌಡರೆ ?

ಅಧ್ಯಕ್ಷರು: ಆಯಿತು ಬಿಡಿ income certificate ಆದರೆ ಅದರ ಮೇಲೆ ಕೊಡುತ್ತಾರೆ.

ಶ್ರೀ ಡಿ.ವಿ. ಸದಾನಂದ ಗೌಡ : ನಾನು ಈಗಾಗಲೇ ಉಲ್ಲೇಖಿಸಿದ ರೀತಿಯಲ್ಲಿ ಪ್ರಾಯಶ" ಈ BPL ನವರಿಗೆ ಉಚಿತ ಮತ್ತು APL ನವರಿಗೆ ರೂ. 350/– ಸೌಲಭ್ಯ ಕೊಡುವುದನ್ನು ಸರ್ಕಾರ ಮುಂದುವರಿಸುತ್ತದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ರಿಯಾರಿಟಿಯಲ್ಲಿ ಇದಕ್ಕೆ ಬೇಕಾದ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೇವೆ. ಅವರು, ಕೆಲವು ಕಡೆ ವೈದ್ಯರುಗಳ ಲಭ್ಯತೆಯಿಲ್ಲ, ಸಾಗರದಲ್ಲಿ ಶುರುವಾಗಿಲ್ಲ ಎಂದು ಹೇಳಿದರು. ಸಾಗರ ಆಸ್ಪತ್ರೆಯಲ್ಲಿ 6 ಡಯಾಲಿಸಿಸ್ ಯಂತ್ರಗಳಿವೆ. ಈಗಾಗಲೇ 13 ಜನ ಅಲ್ಲಿ ಅದರ ಸೌಲಭ್ಯವನ್ನು ಪಡೆದಿರುತ್ತಾರೆ. ಒಟ್ಟು 95 ಸುತ್ತಿನ ಡಯಾಲಿಸಿಸ್ ಚಿಕಿತ್ಸೆಯನ್ನು ಸಾಗರ ಆಸ್ಪತ್ರೆಯಲ್ಲಿ ಕೊಡಲಾಗಿದೆ. ಇನ್ನೂ ಹೆಚ್ಚಿನ ತಜ್ಞರು ಬೇಕು ಎನ್ನುವ ನಿಮ್ಮ ಬೇಡಿಕೆಯನ್ನು ನಾವು ಪರಿಶೀಲಿಸಲಿಕ್ಕೆ ನಾವು ತಯಾರಿದ್ದೇವೆ Kidney transplantation ಬಗ್ಗೆ ರವಿ ಸುಬ್ರಹ್ಮಣ್ಯರವರು ಉಲ್ಲೇಖಿಸಿದರು. ಇದು ಕೇಂದ್ರ ಸರ್ಕಾರದ Act ಆಗಿದ್ದು. ಇದೊಂದು ಭಾರಿ stringent Act ಆಗಿದೆ. ಆದಕಾರಣ, ನಾಣು ಈ ಹಂತದಲ್ಲಿ ಇದರ ಬಗ್ಗೆ ಏನೂ ಹೇಳವುದಕ್ಕಾಗುವುದಿಲ್ಲ. ನಿಜ, ಅದನ್ನು ಸಡಿಲಿಸಬೇಕಾದರೆ ಆ ಕಾನೂನಿಗೆ ತಿದ್ದುಪಡಿ ತರುವ ಅವಶ್ಯಕತೆಗಳಿವೆ. ಉಳಿದಂತೆ ಮೂರು ಜಿಲ್ಲಾ ಕೇಂದ್ರಗಳಲ್ಲಿ ಮತ್ತು ತಾಲ್ಲೂಕು ಮಟ್ಟಕ್ಕೆ ಇದನ್ನು ವಿಸ್ತರಿಸಬೇಕೆಂದು ಹೇಳಿದ್ದಾರೆ. ನಿಜ ಒಂದಷ್ಟು ವೈದ್ಯರುಗಳ ಕೊರತೆಯನ್ನು ನಾವು ಅನುಭವಿಸುತ್ತಿದ್ದೇವೆ. ಈ ವೈದ್ಯರುಗಳ ಕೊರತೆಯನ್ನು ನೀಗಿಸಲಿಕ್ಕೆ ನಾವು ಈಗಾಗಲೇ ಕೆಲವು ಪ್ರಯತ್ನಗಳನ್ನು ಕೈಗೆತ್ತಿಕೊಂಡಿದ್ದೇವೆ. ಅದನ್ನು ಕೂಡ ಮುಂದಿನ ದಿನಗಳಲ್ಲಿ

ಮುಗಿಸಿದ ಮೇಲೆ ಎಲ್ಲರಿಗೂ ಇದರ ಸೌಲಭ್ಯಗಳನ್ನು ಒದಗಿಸುವಂಥ ಪ್ರಯತ್ನ ಮಾಡುತ್ತೇವೆ.

ಮಧ್ಯಂತರ ವರ್ತುಲ ರಸ್ತೆ ಯೋಜನೆ

85 (407) ಶ್ರೀ ರಾಮಲಿಂಗಾರೆಡ್ಡಿ (ಬಿ.ಟಿ.ಎಂ, ಲೇಔಟ್) :– ಮಾನ್ಯ ಮುಖ್ಯಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಮಧ್ಯಂತರ ವರ್ತುಲ ರಸ್ತೆಗಾಗಿ ರೈತರ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆಯೇ;

(ಆ) ಹಾಗಿದ್ದಲ್ಲಿ ಎಷ್ಟು ರೈತರಿಂದ ಎಷ್ಟು ಎಕರೆ ಜಮೀನನ್ನು ಭೂ–ಸ್ವಾಧೀನಪಡಿಕೊಳ್ಳಲಾಗಿದೆ; (ವಿವರ ನೀಡುವುದು)

(ಇ) ಈ ಮಧ್ಯಂತರ ವರ್ತುಲ ರಸ್ತೆ ಯೋಜನೆಗಾಗಿ ಭೂಸ್ವಾಧೀನಪಡಿಸಿಕೊಂಡ ರೈತರಿಗೆ ಪರಿಹಾರ ನೀಡಲಾಗಿದೆಯೇ;

(ಈ) ಈ ಮಧ್ಯಂತರ ವರ್ತುಲ ರಸ್ತೆ ಯೋಜನೆಯನ್ನು ಕಾರ್ಯಗತಗೊಳಿಸದೇ ಇರುವುದು ನಿಜವಲ್ಲವೇ:

(ಉ) ಹಾಗಿದ್ದಲ್ಲಿ ರೈತರಿಗೆ ಜಮೀನನ್ನು ಹಿಂದಿರುಗಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಡಿ.ವಿ. ಸದಾನಂದಗೌಡ (ಮಾನ್ಯ ಮುಖ್ಯಮಂತ್ರಿಗಳು):–

(ಅ) ಬೆಂಗಳೂರು ನಗರದ ಸುತ್ತ ಮಧ್ಯಂತರ ವರ್ತುಲ ರಸ್ತೆಯನ್ನು 2006ನೇ ಸಾಲಿನಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದಿಂದ ಯೋಜಿಸಲಾಗಿದೆ. ಆದರೆ ಇರುವರೆವಿಗೂ ಈ ಯೋಜನೆ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿರುವುದಿಲ್ಲ.

(ಆ) ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಗಿರದ ಕಾರಣ ಇರುವರೆವಿಗೂ ಯಾವುದೇ ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿರುವುದಿಲ್ಲ.

(ಇ) ಇದುವರೆವಿಗೂ ಭೂಸ್ವಾಧೀನಪಡಿಸಿಕೊಳ್ಳದ ಕಾರಣ,/ರೈತರು/ ಜಮೀನುದಾರರಿಗೆ ಪರಿಹಾರ ನೀಡುವ ಪ್ರಶ್ನೆ ಉದ್ಭವವಾಗುವುದಿಲ್ಲ.